10. **ಮೌಲ್ಯಮಾಪನ** :

ಘಟಕ ಬೋಧನೆ ನಂತರ ಘಟಕ ಪರೀಕ್ಷೆ ವಿಧಾನ ಅನುಸರಿಸಿ ಸಂತುಲಿತ ಪ್ರಶ್ನೆ ಪತ್ರಿಕೆ ರಚಿಸಿ ಪರೀಕ್ಷೆ ಮಾಡಬೇಕು.

11 ಪ್ರಕಾರದ ಪ್ರಶ್ನಾವಳಿಯನ್ನು ರಚಿಸಿ ಅದಕ್ಕನುಗುಣವಾಗಿ ಉತ್ತರ ಕೀಲಿಯನ್ನು ಬರಿಯುವುದು.

11. **ಸೂಚಿತ ಚಟುವಟಿಕೆಗಳು** :

* ಮೊಘಲರ ಇತಿಹಾಸದ ಮೇಲೆ ಬರೆದಿರುವ ಐತಿಹಾಸಿಕ ಕಥೆ, ಕಾದಂಬರಿ ಮತ್ತು ನಾಟಕಗಳನ್ನು ಓದುವಂತೆ ಸೂಚಿಸುವುದು.
* ಮೊಘಲರ ಪ್ರಸಿದ್ಧ ಐತಿಹಾಸಿಕ ಸ್ಥಳಗಳಿಗೆ ಪ್ರವಾಸ ಕರೆದುಕೊಂಡು ಹೋಗಿ, ಅವಶೇಷಗಳನ್ನು ಅಧ್ಯಯನ ಮಾಡಬಹುದು.
* ದೆಹಲಿ, ಆಗ್ರಾ ಮುಂತಾದ ಕಡೆ ಪ್ರಾಚ್ಯ ವಸ್ತ ಸಂಗ್ರಹಾಲಯಕ್ಕೆ ಭೇಟಿ ನೀಡಿ, ಒಡವೆ, ವಸ್ತ್ರ ಯುದ್ಧಸಾಮಾಗ್ರಿ, ನಾಣ್ಯ ಮುಂತಾದವುಗಳನ್ನು ಪರಿಶೀಲಿಸಲು ಸೂಚಿಸುವುದು.
* ಮೊಘಲ್ ಸಾಮ್ರಾಜ್ಯಕ್ಕೆ ಸಂಬಂಧಿಸಿದ ಫಿಲ್ಮ್ ಸ್ಲೈಡ್ ಗಳನ್ನು ವೀಕ್ಷಿಸಲು ಸೂಚಿಸುವುದು.

12. **ಪರಾಮರ್ಶನ ಗ್ರಂಥಗಳು** :

* **ಶಿಕ್ಷಕರಿಗೆ**

1. **ಭಾರತದ ಇತಿಹಾಸ – ಡಿ.ಟಿ.ಜೋಶಿ**

- ವಂಶಾವಳಿ ಮತ್ತು ಕಾಲರೇಖೆಗಳ ಸಹಾಯದಿಂದ ಮೊಘಲ್ ರಾಜರುಗಳ ಕಾಲಾನುಕ್ರಮಣಿಕೆಯನ್ನು ಮತ್ತು ಅವರ ಆಳ್ವಿಕೆಯ ಅವಧಿಯನ್ನು ವಿದ್ಯಾರ್ಥಿಯು ಗುರುತಿಸುತ್ತಾನೆ.
- ಮೊಘಲರ ಕಾಲದ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಸಂಬಂಧಪಟ್ಟಂತೆ ವರ್ಣಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸುವುದು.
- ಉತ್ತಮ ಅನುಭವಿ,ಜ್ಞಾನವಂತ, ಪರಿಣಾಮಕಾರಿ ವಿದ್ವಾಂಸರಿಂದ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಬಹುದು.

3. ಘಟಕವನ್ನು ಮುಕ್ತಾಯಗೊಳಿಸಲು ;

- ಮೊಘಲ್ ಘಟಕದ ಪ್ರಮುಖ ಪರಿಕಲ್ಪನೆಗಳನ್ನು ಶಿಕ್ಷಕರು ಆಯ್ಕೆ ಮಾಡಿ ಕಾಲರೇಖೆ ಬಳಸಿ ಪರಿಣಾಮಕಾರಿ ಸಂಕ್ಷಿಪ್ತ ನಿರೂಪಣೆ ನೀಡಬಹುದು.
- ಘಟಕದ ಅಂತ್ಯದಲ್ಲಿ ವಿದ್ಯಾರ್ಥಿಗಳು ವಿವಿಧ ಗುಂಪುಗಳಾಗಿ ಪಾಠದ ಬೆಳವಣಿಗೆ ಹಂತದಲ್ಲಿ ತಯಾರಿಸಿದ ವಂಶಾವಳಿ ನಕ್ಷೆ, ಭೂಪಟ, ಮಾದರಿ, ವರ್ಣಚಿತ್ರ, ಕಾಲರೇಖೆಗಳ ಪ್ರದರ್ಶನ ಏರ್ಪಡಿಸಬಹುದು.
- ಮೊಘಲರ ಕಾಲದ ಕಲೆ, ವಾಸ್ತುಶಿಲ್ಪ,ಸಾಹಿತ್ಯ ಮತ್ತು ಸಂಗೀತ ಸಾಧನೆಗಳ ಪಟ್ಟಿ ಮಾಡಿ ತರಗತಿಯಲ್ಲಿ ಓದಲು ಹೇಳಬಹುದಾಗಿದೆ.

9. ಕಲಿಕೆಯ ಚಟುವಟಿಕೆಗಳು :

1. **ಘಟಕವನ್ನು ಆರಂಭಿಸಲು**

- 16 ನೇಯ ಶತಮಾಣದ ದೆಹಲಿ ಸಿಂಹಾಸನವೇರಿದ ಲೂದಿ ವಂಶದವರ ಆಳ್ವಿಕೆ ಬಗ್ಗೆ ಚರ್ಚಾಕೂಟ ಏರ್ಪಡಿಸುವುದು.
- ದೆಹಲಿ ಸುಲ್ತಾನರ ಸಾಮ್ರಾಜ್ಯ ವಿಸ್ತರಣೆ ಮತ್ತು ಆಡಳಿತವನ್ನು ವಿಮರ್ಶೆಗೆ ಒಳಪಡಿಸುವುದು.
- ಎಂಟನೆಯ ಶತಮಾನದಿಂದ ಮಧ್ಯಕಾಲೀನ, ಅಂದರೆ ದೆಹಲಿ ಸುಲ್ತಾನರವರೆಗೆ ಶರವೇಗದಲ್ಲಿ ಇಸ್ಲಾಂ ಸ್ವಾಮ್ಯ ಸ್ಥಾಪಿಸಲು ಹೊರಟ ಆ ಕಾಲದ ಪ್ರಮುಖ ಐತಿಹಾಸಿಕ ಸಂಗತಿ ಬಗ್ಗೆ ಪೂರ್ವ ನಿರೀಕ್ಷಿತ ಜ್ಞಾನವನ್ನು ಆಧರಿಸಿ ಪ್ರಶ್ನೋತ್ತರ ನಡೆಸುವುದು.
- ಪ್ರವಾಸೋಧ್ಯಮ ಇಲಾಖೆಯವರು ಪ್ರಕಟಿಸಿರುವ ಮೊಘಲ್ ಸಾಮ್ರಾಟರಿಗೆ ಸಂಬಂಧಪಟ್ಟ ಪ್ರಚಾರ ಸಾಮಾಗ್ರಿ ತೋರಿಸುವುದು. ಅನಂತರ ಅವುಗಳನ್ನು ಗುರುತಿಸಿ ವಿವರಗಳನ್ನು ಓದಲು ಹೇಳಿ,ಉದ್ಧೇಶಿತ ಪಾಠಕ್ಕೆ ಸಂಬಂಧ ಕಲ್ಪಿಸುವುದು.
- ಭಾರತದ ಸಾಂಸ್ಕೃತಿಕ ಸಂಪತ್ತನ್ನು ಪ್ರಚಾರ ಮಾಡುವ ಭಿತ್ತಿ ಪತ್ರಗಳನ್ನು ಬಳಸಿಕೊಳ್ಳುವುದು.

2. **ಘಟಕವನ್ನು ಬೆಳೆಸಲು** :

* ಭಾರತದ ಭೂಪಟವನ್ನು ತೋರಿಸಿ ಮೊಘಲ್ ಸಾಮ್ರಾಜ್ಯದ ಸ್ಥಾಪನೆಗೆ ಮುನ್ನ ಇದ್ದಂತಹ ಉತ್ತರ ಮತ್ತು ದಕ್ಷಿಣ ಭಾರತದ ರಾಜಕೀಯ ಐಕ್ಯತೆಯ ಬಗ್ಗೆ ಸ್ಪಷ್ಟ ವಿವರಣೆ ನೀಡುವುದು.

8. ನಿರ್ದಿಷ್ಟ ಸಮಯ (ನಿಗಧಿಸಿರುವುದು) :

| ಸಂಖ್ಯೆ | ಬೋಧನಾಂಶಗಳು | ಉಪಬೋಧನಾಂಶಗಳು | ನಿಗಧಿಪಡಿಸಿದ ಸಮಯ |
|---|---|---|---|
| 1. | ಮೊಘಲ್ ಸಾಮ್ರಾಜ್ಯ ಸ್ಥಾಪನೆಗೆ ಪೂರ್ವದಲ್ಲಿದ್ದ ಭಾರತದ ಸ್ಥಿತಿ | •ಉತ್ತರ ಭಾರತದ ರಾಜಕೀಯ ಸ್ಥಿತಿ<br>• ದಕ್ಷಿಣ ಭಾರತದ ಸ್ಥಿತಿ | 3 ಅವಧಿ |
| ಸುಜ್ಞೆ | ಸುಜ್ಞೆ | ಸುಜ್ಞೆ | ಸುಜ್ಞೆ |
| ಸುಜ್ಞೆ | ಸುಜ್ಞೆ | ಸುಜ್ಞೆ | ಸುಜ್ಞೆ |
| ಸುಜ್ಞೆ | ಸುಜ್ಞೆ | ಸುಜ್ಞೆ | ಸುಜ್ಞೆ |
| ಸುಜ್ಞೆ | ಸುಜ್ಞೆ | ಸುಜ್ಞೆ | ಸುಜ್ಞೆ |
| ಸುಜ್ಞೆ | ಒಟ್ಟು | | 15 ಅವಧಿಗಳು |

- ವಿದ್ಯಾರ್ಥಿಯು ಮೊಘಲ್ ಸಾಮ್ರಾಜ್ಯದ ಅವನತಿಯನ್ನು ವಿಶ್ಲೇಷಿಸುತ್ತಾನೆ.

5. ಬಳಸಬೇಕಾಗಿರುವ ವಿಧಾನಗಳು :

- ಉಪನ್ಯಾಸ , ಮೂಲಾಧಾರ ವಿಧಾನ, ಮತ್ತ ಚರ್ಚಾ ವಿಧಾನ, ಇತ್ಯಾದಿ.

6. ಬೋಧನೋಪಕರಣಗಳು :

ಬೋಧಿಸುವ ಘಟಕಕ್ಕೆ ಸಂಬಂಧಿಸಿದಂತೆ ಕಲಿಕೋಪಕರಣಗಳನ್ನು ಬಳಸಬಹುದು.

7. ಬೋಧನಾಂಶಗಳು

- ಮೊಘಲ್ ಸಾಮ್ರಾಜ್ಯ ಸ್ಥಾಪನೆಗೆ ಪೂರ್ವದಲ್ಲಿದ್ದ ಭಾರತದ ಸ್ಥಿತಿ
- ಮೊಘಲ್ ಸಾಮ್ರಾಜ್ಯದ ಪ್ರಮುಖ ಅರಸರುಗಳು
- ಮೊಘಲರ ಆಡಳಿತ ವ್ಯವಸ್ಥೆ
- ಮೊಘಲರ ಕೊನೆಯ ಅರಸರುಗಳು
- ಮೊಘಲರ ಅವನತಿಗೆ ಕಾರಣಗಳು
- ಮೊಘಲರ ಸಾಂಸ್ಕೃತಿಕ ಕೊಡುಗೆಗಳು
- ಮೊಘಲರ ಕಲೆ ಮತ್ತು ವಾಸ್ತುಶಿಲ್ಪ

3. ಕೌಶಲ :

- ವಿದ್ಯಾರ್ಥಿಯು ಭಾರತದ ಭೂಪಟದಲ್ಲಿ ದೆಹಲಿ, ಆಗ್ರಾ, ಮೇವಾರ್, ಫತೇಪುರ್ ಸಿಕ್ರಿ, ಸ್ಥಳಗಳನ್ನು ಗುರುತಿಸುತ್ತಾನೆ.
- ವಿದ್ಯಾರ್ಥಿಯು ಬಾಬರ್, ಅಕ್ಬರ್, ಔರಂಗಜೇಬ್ ಮುಂತಾದವರ ಕಾಲದ ಸಾಮ್ರಾಜ್ಯದ ಎಲ್ಲೇಗಳನ್ನು ಓದುತ್ತಾನೆ.
- ವಿದ್ಯಾರ್ಥಿಯು ಕೆಂಪು ಕೋಟೆ, ಆಗ್ರಾದ ತಾಜ್ ಮಹಲ್ ಮುಂತಾದ ಮಾದರಿಗಳನ್ನು ತಯಾರಿಸುತ್ತಾನೆ.
- ವಿದ್ಯಾರ್ಥಿಯು ಮೊಘಲ್ ವಂಶದ ಕಾಲರೇಖೆಯನ್ನು ತಯಾರಿಸುತ್ತಾನೆ.
- ವಿದ್ಯಾರ್ಥಿಯು ಮೊಘಲ್ ವಂಶಾವಳಿ ನಕ್ಷೆ ಓದುತ್ತಾನೆ.
- ವಿದ್ಯಾರ್ಥಿಯು ಏಷ್ಯಾ ಖಂಡದ ಭೂಪಟದಲ್ಲಿ ಆಫ್ಘಾನಿಸ್ತಾನ ಮತ್ತು ಭಾರತವನ್ನು ಗುರುತಿಸುತ್ತಾನೆ.

4. ಅನ್ವಯಿಕೆ :

- ವಿದ್ಯಾರ್ಥಿಯು ಬಾಬರನ ದಿಗ್ವಿಜಯಗಳ ಬಗ್ಗೆ ಭವಿಷ್ಯ ನುಡಿಯುತ್ತಾನೆ.
- ವಿದ್ಯಾರ್ಥಿಯು ಮೊಘಲ್ ಸಾಮ್ರಾಜ್ಯದ ಉದಯಕ್ಕೆ ಕಾರಣವಾದ ಅಂಶಗಳ ವಿಶ್ಲೇಷಣೆ ಮಾಡುತ್ತಾನೆ.

- ವಿದ್ಯಾರ್ಥಿಯು ಅಕ್ಬರನ ಆಸ್ಥಾನದ ಪ್ರಮುಖ ಹಾಸ್ಯಗಾರ ಬೀರಬಲ್ಲನನ್ನು ಗುರುತಿಸುತ್ತಾನೆ
- ವಿದ್ಯಾರ್ಥಿಯು ಮೊಘಲರು ಉತ್ತಮ ಮತ್ತು ದಕ್ಷ ಸೈನ್ಯ ವ್ಯವಸ್ಥೆ ಹೊಂದಿದ್ದರೆಂದು ಸ್ಮರಿಸಿಕೊಳ್ಳುತ್ತಾನೆ.
- ವಿದ್ಯಾರ್ಥಿಯು ಮೊಘಲರು ಕಲೆ ಮತ್ತು ವಾಸ್ತುಶಿಲ್ಪಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸುತ್ತಾನೆ.
- ವಿದ್ಯಾರ್ಥಿಯು ಮೊಘಲರ ಕೆಂಪುಕೋಟೆ, ಆಗ್ರಾದ ತಾಜ್ ಮಹಲ್ ಮುಂತಾದವುಗಳನ್ನು ಚಿತ್ರಗಳಲ್ಲಿ ಗುರುತಿಸುತ್ತಾನೆ.

2. ತಿಳುವಳಿಕೆ :

- ವಿದ್ಯಾರ್ಥಿಯು ಮೊಘಲ್ ಸಾಮ್ರಾಜ್ಯವು ದೌಲತ್ ಖಾನ್ ಲೂದಿ ಸಹಾಯದಿಂದ ಸ್ಥಾಪನೆಯಾಯಿತೆಂದು ವಿವರಿಸುತ್ತಾನೆ.
- ವಿದ್ಯಾರ್ಥಿಯು ಮೊಘಲರ ಕಾಲದ ಮನ್ಸಬ್ ದಾರಿ ಪದ್ಧತಿಯನ್ನು ವಿವರಿಸುತ್ತಾನೆ.
- ವಿದ್ಯಾರ್ಥಿಯು ಮೊಘಲರ ಕಾಲದ ಯುದ್ಧಗಳಿಗೆ ಕಾರಣ ಕೊಡುತ್ತಾನೆ
- ವಿದ್ಯಾರ್ಥಿ ಔರಂಗಜೇಬ್‌ನ ಧಾರ್ಮಿಕ ನೀತಿಯನ್ನು ಸಂಕ್ಷಿಪ್ತಗೊಳಿಸಿ ಹೇಳುತ್ತಾನೆ.
- ವಿದ್ಯಾರ್ಥಿಯು ಮೊಘಲರ ರಜಪೂತರ ನೀತಿಯನ್ನು ಉದಾಹರಿಸುತ್ತಾನೆ.

- ಹುಮಾಯೂನ್ ದಕ್ಷ ಆಡಳಿತಗಾರ ಮತ್ತು ಸಾಹಿತ್ಯ ಪ್ರೇಮಿಯಾಗಿದ್ದನೆಂದು ಸಾಮಾನ್ಯೀಕರಣಗೊಳಿಸುವುದು.
- ಅಕ್ಬರ್ ದಕ್ಷ ಆಡಳಿತಗಾರನಾಗಿದ್ದು ಪರಮತ ಸಹಿಷ್ಣುವಾಗಿ ಮತ್ತು ಕಲೆ, ಸಾಹಿತ್ಯ ಹಾಗೂ ಸಂಗೀತ ಪೋಷಕನಾಗಿದ್ದ ಎಂದು ಸಾಮಾನ್ಯೀಕರಿಸುವುದು.
- ಔರಂಗಜೇಬ್ ನ ಧಾರ್ಮಿಕ ನೀತಿಯನ್ನು ಸಾಮಾನ್ಯೀಕರಿಸುವುದು.
- ಮೊಘಲ್ ನೂರ್‌ಜಹಾನ್ ಮತ್ತು ಮಮತಾಜ್ ಮಹಲ್ ರಾಣಿಯರು ದಕ್ಷ ಆಡಳಿತಗಾರರಾಗಿದ್ದರೆಂದು ಸಾಮಾನ್ಯೀಕರಿಸುವುದು.
- ಮೊಘಲರು ಸುಸಜ್ಜಿತವಾದ ಸೈನ್ಯವನ್ನು ಹೊಂದಿದ್ದರೆಂದು ಸಾಮಾನ್ಯೀಕರಿಸುವುದು.
- ಮೊಘಲರು ದಕ್ಷ ರೀತಿಯಲ್ಲಿ ಕೇಂದ್ರ ಮತ್ತು ಪ್ರಾಂತಾಡಳಿತ ಹಾಗೂ ನ್ಯಾಯಾಂಗ ವ್ಯವಸ್ಥೆಯನ್ನು ಹೊಂದಿದ್ದರೆಂದು ಸಾಮಾನ್ಯೀಕರಿಸುವುದು.

4. ಬೋಧನೋದ್ದೇಶಗಳು :

1. ಜ್ಞಾನ :

- ವಿದ್ಯಾರ್ಥಿಯು ಮೊಘಲರ ವಿವಿಧ ರಾಜರುಗಳ ಮತ್ತು ಸ್ಥಳಗಳ ಹೆಸರುಗಳನ್ನು ಸ್ಮರಿಸಿಕೊಳ್ಳುತ್ತಾರೆ.
- ವಿದ್ಯಾರ್ಥಿಯು ಅಕ್ಬರನ ಆಸ್ಥಾನದ ಪ್ರಮುಖ ಸಂಗೀತ ವಿದ್ವಾನ್ ತಾನ್‌ಸೇನ್‌ನನ್ನು ಗುರುತಿಸುತ್ತಾನೆ.

3. ಅ) **ಪ್ರಧಾನ ಪರಿಕಲ್ಪನೆಗಳು :**

1. ಭಾರತೀಯ ರಾಜರಲ್ಲಿ ದ್ವೇಷ, ಅಸೂಯೆ, ಅನೈಕ್ಯತೆ ಪರಕೀಯರ ಆಳ್ವಿಕೆಗೆ ಆಹ್ವಾನ.
2. ಬಾಬರನ ಮಹತ್ವಾಕಾಂಕ್ಷೆ ಮತ್ತು ಆಧುನಿಕ ಶಸ್ತ್ರಾಸ್ತ್ರಗಳ ಪ್ರಥಮ ಬಳಕೆ
3. ಷೇರ್‌ಷಹನ ಉತ್ತಮ ಆಡಳಿತ ವ್ಯವಸ್ಥೆ.
4. ಅಕ್ಬರನ ಸಹಮತ ಸಹಿಷ್ಣುತೆ, ಕಲೆ, ಸಾಹಿತ್ಯ, ಸಂಗೀತಕ್ಕೆ ಪ್ರೋತ್ಸಾಹ.
5. ಮೊಘಲರ ಕಾಲದ ಸುಪ್ರಸಿದ್ಧ ಕಲೆ, ಸಾಹಿತ್ಯಸಂಗೀತ ಮತ್ತು ಸೈನ್ಯ ವ್ಯವಸ್ಥೆ.
6. ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕೊನೆ ಅರಸರುಗಳು.

ಆ) ಸಾಮಾನ್ಯೀಕರಣಗಳು :

ಆಯ್ಕೆ ಮಾಡಿಕೊಂಡಿರುವ ವಿಷಯದಲ್ಲಿ ಬೋಧನಾ ವೇಳೆಯಲ್ಲಿ ಬರುವಂತಹ ನೀತಿ, ನಿಯಮ, ತತ್ವ, ಸಿದ್ಧಾಂತ, ಸಂಗತಿ ಮತ್ತು ಘಟನೆಗಳ ಹಿನ್ನಲೆಯಲ್ಲಿ ಎಲ್ಲರೂ ಸಹ ಒಪ್ಪುವಂತಹ ತೀರ್ಮಾನಗಳನ್ನು ಸಾಮಾನ್ಯೀಕರಣವೆಂದು ಕರೆಯುತ್ತೇವೆ. ಸಮಾಜ ವಿಜ್ಞಾನದ 'ಮೊಘಲ್ ಸಾಮ್ರಾಜ್ಯ'ಎಂಬ ಘಟಕದಲ್ಲಿ ಇಂತಹ ಯಾವ ಸಾಮಾನ್ಯೀಕರಣ ಮಾಡಲಾಗುತ್ತದೆಂದು ತಿಳಿಸುವುದಾಗಿದೆ. ಅವುಗಳು ಈ ಮುಂದಿವೆ.

1. ಮೊಘಲರಲ್ಲಿ ಬಾಬರ್, ಹುಮಾಯೂನ್, ಅಕ್ಬರ್, ಜಹಾಂಗೀರ್, ಷಹಜಹಾನ್ ಮತ್ತು ಔರಂಗಜೇಬ್ ಇವರುಗಳು ಅತ್ಯಂತ ದಕ್ಷರಾದ ರಾಜರುಗಳಾಗಿದ್ದರೆಂದು ಸಾಮಾನ್ಯೀಕರಿಸುವುದು.

- **ಮಾದರಿ ಸಂಪನ್ಮೂಲ ಘಟಕ**

1. ಘಟಕದ ಶಿರೋನಾಮೆ : ಮೊಘಲ್ ಸಾಮ್ರಾಜ್ಯ

   ವಿಷಯ :ಇತಿಹಾಸ

2. ಘಟಕದ ಮಹತ್ವ ಮತ್ತು ವ್ಯಾಪ್ತಿ ;

   **ಘಟಕದ ಮಹತ್ವ :,**

* **ಮೊಘಲ್ ಸಾಮ್ರಾಜ್ಯವು ಭಾರತದ ಇತಿಹಾಸದಲ್ಲಿ ವಿಶಿಷ್ಟ ಸ್ಥಾನವನ್ನು ಹೊಂದಿದೆ. ಆಧುನಿಕ ಭಾರತೀಯ ಇತಿಹಾಸಕ್ಕೆ ತಿರುವನ್ನು ನೀಡಿದೆ.**
- **ಸುಮಾರು 300 ವರ್ಷಗಳ ಕಾಲ ವೈಭವದಿಂದ ಮೆರೆದು ದಕ್ಷ ಪ್ರಾಂತಾಡಳಿತ ಮತ್ತು ಸೈನ್ಯ ವ್ಯವಸ್ಥೆಯನ್ನು ಹೊಂದಿತ್ತು.**
- **ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಮುಂತಾದ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದ್ದಿತು. ಹಾಗೆಯೇ ಕಲೆ, ಸಾಹಿತ್ಯ ಮತ್ತು ಸಂಗೀತ ಕ್ಷೇತ್ರದಲ್ಲಿ ಇಡೀ ವಿಶ್ವವೇ ಗುರುತಿಸುವಂತಹ ಸಾಧನೆಗೈದಿದೆ. ಆದ್ದರಿಂದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಇದರ ಅಧ್ಯಯನವು ಅತ್ಯಂತ ಮಹತ್ವವುಳ್ಳದ್ದಾಗಿದೆ.**
- **ವ್ಯಾಪ್ತಿ :**

  **– ಬಾಬರನ ಮಹತ್ವಾಕಾಂಕ್ಷೆ – ಬಾಬರ್ ಭಾರತಕ್ಕೆ ಬರುವ ಪೂರ್ವ ಭಾರತದ ಸ್ಥಿತಿ, ಹುಮಾಯೂನ್–ಷೇರಷಹ–ಅಕ್ಬರ್–ಜಹಾಂಗೀರ್–ಷಹಜಹಾನ್ – ಔರಂಗಜೇಬ್–ಬಹದ್ದೂರ್ ಷಾಜಾಫರ್, ಮೊಘಲರ ಕಾಲದ – ಪ್ರಾಂತಾಡಳಿತ ,ಕಲೆ, ಸಾಹಿತ್ಯ ಮತ್ತು ಸಂಗೀತ ಇತ್ಯಾದಿ ಕ್ಷೇತ್ರಗಳಿಗೆ ನೀಡಿದ ಅಪಾರ ಕೊಡುಗೆಯನ್ನು ಒಳಗೊಂಡಿದೆ.**

## ಸಂಪನ್ಮೂಲ ಘಟಕದ ರೂಪರೇಷೆ (ಹಂತಗಳು)

1. **ಘಟಕದ ಶಿರೋನಾಮೆ**
2. **ಘಟಕದ ಮಹತ್ವ ಮತ್ತು ವ್ಯಾಪ್ತಿ**
3. **ಘಟಕದ ಪ್ರಧಾನ ಪರಿಕಲ್ಪನೆ ಮತ್ತು ಸಾಮಾನ್ಯೀಕರಣಗಳು**
4. **ಬೋಧನೋದ್ದೇಶಗಳು ಮತ್ತು ನಿರ್ದಿಷ್ಟಗಳು ()**
5. **ಬಳಸಬೇಕಾಗಿರುವ ವಿಧಾನಗಳು**
6. **ಪಾಠೋಪಕರಣಗಳು**
7. **ವಿಷಯ–ವಿಶ್ಲೇಷಣೆ**
8. **ಕಲಿಕೆಯ ಚಟುವಟಿಕೆಗಳು**

ಅ. ಘಟಕವನ್ನು ಆರಂಭಿಸಲು

ಆ. ಘಟಕವನ್ನು ಬೆಳೆಸಲು

ಇ. ಘಟಕವನ್ನು ಮುಕ್ತಾಯಗೊಳಿಸಲು

9. **ಮೌಲ್ಯಮಾಪನ (ಘಟಕ ಪರೀಕ್ಷೆ)**
10. **ಸೂಚಿತ ಚಟುವಟಿಕೆಗಳು**
11. **ಪರಾಮರ್ಶನ ಗ್ರಂಥಗಳು.**

ಅ. ಶಿಕ್ಷಕರಿಗೆ

ಆ. ವಿದ್ಯಾರ್ಥಿಗಳಿಗೆ

- ಪಾಠ ಯೋಜನೆ ಮತ್ತು ಸಂಪನ್ಮೂಲ ಘಟಕ ಯೋಜನೆಯ ನಡುವಿನ ವ್ಯತ್ಯಾಸಗಳು

| ಪಾಠ ಯೋಜನೆ | ಸಂಪನ್ಮೂಲ ಘಟಕ ಯೋಜನೆ |
|---|---|
| 1. ಬೋಧಿಸುವ ಶಿಕ್ಷಕರಿಂದಲೇ ತಯಾರಿಸಲ್ಪಟ್ಟಿರುತ್ತದೆ. | 1. ಪರಿಣಿತ ಶಿಕ್ಷಕರ ಸಮೂಹ ತಯಾರಿಸುತ್ತದೆ. |
| 2. ಸಿದ್ಧಪಡಿಸಿದ ಶಿಕ್ಷಕರು ಮಾತ್ರ ಉಪಯೋಗಿಸುತ್ತಾರೆ. | 2. ಎಲ್ಲಾ ಕಾಲಕ್ಕೂ ಎಲ್ಲಾ ಶಿಕ್ಷಕರು ಬಳಸ ಬಹುದಾಗಿದೆ. |
| 3. ಇದರ ವ್ಯಾಪ್ತಿ ಸೀಮಿತವಾಗಿದೆ. | 3. ಇದರ ವ್ಯಾಪ್ತಿ ವಿಶಾಲವಾಗಿದೆ. |
| 4. ಒಂದು ಪರಿಕಲ್ಪನೆಯ ಬಗ್ಗೆ ಸ್ಪಷ್ಟವಾಗಿ ಕಾಣುವ ದೊಡ್ಡ ಭಾಗ. | 4. ಒಂದು ಸಮಗ್ರ ಘಟಕದ ಸುತ್ತಲೂ ಯೋಜಿಸಲ್ಪಟ್ಟ ವಿಷಯ. |
| 5. ಇದು ಒಂದು ಘಟಕದ ಸುತ್ತ ಇರುವ ವಿಧಾನಗಳನ್ನು ಎತ್ತಿ ಹಿಡಿಯುತ್ತದೆ. | 5. ಆ ಘಟಕದ ವಿಧಾನಗಳ ಜೊತೆಗೆ ಸಂಪೂರ್ಣ ಆಕರಗಳನ್ನು ಒದಗಿಸುತ್ತದೆ. |
| 6.ಇಲ್ಲಿ ಘಟಕ ಯೋಜನೆ ಸಿದ್ಧಪಡಿಸಿದ ಶಿಕ್ಷಕ ಅನುಸರಿಸುವ ಬೋಧನಾ ಪದ್ಧತಿ ಚಟುವಟಿಕೆ, ಪಾಠೋಪಕರಣ ಮೌಲ್ಯ ಮಾಪನಗಳನ್ನು ಒಳಗೊಂಡಿರುತ್ತದೆ. | 6. ಇಲ್ಲಿ ಶಿಕ್ಷಕರು ಬೋಧನೆಗೆ ಬಳಸಬಹುದಾದ ವಿವಿಧ ಪದ್ಧತಿ, ಚಟುವಟಿಕೆ, ವಿದ್ಯಾರ್ಥಿ ಮತ್ತು ಶಿಕ್ಷಕರಿಗೆ ಸಂಬಂಧಿಸಿದಂತೆ ಆಕರ ಗ್ರಂಥಗಳು, ಸೂಚಿತ ಚಟುವಟಿಕೆ ಇತ್ಯಾಧಿಗಳ್ನು ಒಳಗೊಂಡಿರುತ್ತದೆ. |

ಇಂತಹ ಸಂದರ್ಭದಲ್ಲಿ ಉತ್ತಮವಾಗಿ ತಯಾರಿಸಿದ ಸಂಪನ್ಮೂಲ ಘಟಕವು ಇತಿಹಾಸ ಶಿಕ್ಷಕನ ನೆರವಿಗೆ ಬರುತ್ತದೆ. ಒಟ್ಟಿನಲ್ಲಿ "ಸಂಪನ್ಮೂಲ ಘಟಕವು ಶಿಕ್ಷಕರಿಂದ, ಶಿಕ್ಷಕರಿಗಾಗಿ, ಶಿಕ್ಷಕರಿಗೋಸ್ಕರ ತಯಾರಿಸುವ ಒಂದು ಸುಸಂಬದ್ಧ ಯೋಜನೆಯಾಗಿದೆ".

❖ ಸಂಪನ್ಮೂಲ ಘಟಕದ ಲಕ್ಷಣಗಳು ( )

1. ಇದು ಒಂದು ಪೂರ್ಣ ಘಟಕವನ್ನಾಧರಿಸಿದಂತೆ ರಚಿಸಲ್ಪಟ್ಟ ಯೋಜನೆಯಾಗಿದೆ.
2. ಅಧಿಕ ವಿಷಯ ಸಂಗ್ರಹಣೆ, ಚಟುವಟಿಕೆಗಳು ಮತ್ತು ಬೋಧನಾ ಸಾಮಾಗ್ರಿಗಳನ್ನಾಧರಿಸಿರುವುದು.
3. ಶಿಕ್ಷಕರಿಗೆ ಬೋಧನಾ ಯಶಸ್ಸಿಗೆ ನಿರಂತರ ಮಾರ್ಗದರ್ಶಿಯಾಗಿದೆ.
4. ಇದರ ವ್ಯಾಪ್ತಿಯು ವಿಶಾಲವಾಗಿದ್ದು, ದೀರ್ಘಕಾಲಿಕವಾಗಿ ಉಪಯುಕ್ತವಾಗಿದೆ.
5. ಒಮ್ಮೆ ರಚಿಸಿದ ಸಂಪನ್ಮೂಲ ಘಟಕವನ್ನು ಪುನರ್ ವಿಮರ್ಶಿಸಿ ಅಭಿವೃದ್ಧಿ ಪಡಿಸಬಹುದು.
6. ಕ್ರಿಯಾತ್ಮಕವಾಗಿ ಮತ್ತು ರಚನಾತ್ಮಕವಾಗಿ ಘಟಕದ ಪರಿಕಲ್ಪನೆಗಳ ಸುತ್ತಲೂ ಜೋಡಿಸಲ್ಪಟ್ಟಿವೆ
7. ವಿದ್ಯಾರ್ಥಿಗಳ ತಾರ್ಕಿಕ ಆಲೋಚನೆಗೆ ಸಂಬಂಧಿಸಿದಂತೆ ಭೇಟಿ, ವಿಷಯ ಸಂಗ್ರಹಣೆ, ಇತ್ಯಾದಿ ಚಟುವಟಿಕೆಗಳನ್ನು ಸೂಚಿಸುತ್ತದೆ.
8. ಆಧಾರಗ್ರಂಥ ಮತ್ತು ಸೂಚಿತ ಗ್ರಂಥಗಳ ಬಗ್ಗೆ ತಿಳುವಳಿಕೆ ನೀಡುತ್ತದೆ.
9. ಕ್ರಮಬದ್ಧವಾಗಿ ಪಾಠ ಬೋಧಿಸಲು ಶಿಕ್ಷಕನಿಗೆ ಮಾರ್ಗದರ್ಶನ ನೀಡುವುದು.
10. ಪಾಠದ ಪ್ರಧಾನ ಕಲ್ಪನೆಯ ಸುತ್ತ ಬೋಧನೆ ಸಾಗುವಂತೆ ರೂಪಿಸಲ್ಪಟ್ಟಿರುತ್ತದೆ.

2. Regional College of Education : ಕೈಪಿಡಿಯಂತೆ, "ತಮ್ಮ ತಮ್ಮ ತರಗತಿಗಳಿಗೆ ಯುಕ್ತವಾದ ಅವರ ಸ್ವಂತ ಬೋಧನಾ ಘಟಕವನ್ನು ಬೆಳೆಸುವುದುರಲ್ಲಿ ಶಿಕ್ಷಕರಿಗೆ ಸಹಾಯಕವಾಗುವ ರೀತಿಯಲ್ಲಿ ವಿನ್ಯಾಸಗೊಳಿಸಲ್ಪಟ್ಟ ಏಕ ಪ್ರಕರಣ ಅಥವಾ ಕಲಿಯುವವನ ಸಮಸ್ಯೆಯ ಸುತ್ತ ವ್ಯವಸ್ಥೆಗೊಳಿಸಲ್ಪಟ್ಟ, ಸೂಚಿತ ಕಲಿಕೆ, ಬೋಧನೆಯ ಚಟುವಟಿಕೆಗಳು, ವಿಧಾನಗಳು, ವಸ್ತುಗಳು ಮತ್ತು ಆಕರಗಳ ಸಂಪೂರ್ಣ ಶೇಖರಣೆ ಸಂಪನ್ಮೂಲ ಘಟಕ".

3 ಎಡ್ರಸ್ಟ್ ಪ್ರಕಾರ : "ಸಂಪನ್ಮೂಲ ಘಟಕವು ಶಿಕ್ಷಕ ತರಗತಿಯೊಡನೆ ಕಲಿಸುವ ಘಟಕವೊಂದನ್ನು ಯೋಜಿಸುವುದು ಮತ್ತು ಬೆಳೆಸುವುದರಲ್ಲಿ ಬಳಸಲ್ಪಡುವ ಅಂಶೀಯ ಮಾದರಿಯಲ್ಲಿ ವ್ಯವಸ್ಥೆಗೊಳಿಸಲ್ಪಟ್ಟ ಪ್ರಕರಣ ಕ್ಷೇತ್ರಕ್ಕೆ ಸಂಬಂಧಿಸಿದ ವಸ್ತುಗಳು, ಚಟುವಟಿಕೆಗಳು ಹಾಗೂ ಸಂಪನ್ಮೂಲಗಳ ಶೇಖರಣೆಯಾಗಿದೆ".

ಸಂಪನ್ಮೂಲ ಘಟಕವನ್ನು ತಯಾರಿಸುವುದರ ಅವಶ್ಯಕತೆ :

ಒಬ್ಬ ಉತ್ತಮ ಶಿಕ್ಷಕನು ಬೋಧನೆ ಕೈಗೊಳ್ಳುವ ಮುನ್ನ ಘಟಕ ಯೋಜನೆಯನ್ನು ವಿಶೇಷ ರೀತಿಯಲ್ಲಿ ಸಿದ್ಧಪಡಿಸಿ, ಇದನ್ನಾಧರಿಸಿದಂತೆ ಪಾಠಯೋಜನೆಯನ್ನು ತಯಾರಿಸಿ, ಬೋಧಿಸುತ್ತಾನೆ. ಶಿಕ್ಷಕನು ಪ್ರತಿನಿತ್ಯ 5 ರಿಂದ 6 ಅವಧಿಗಳಷ್ಟು ಬೋಧಿಸಬೇಕಾಗಿರುವುದರಿಂದ ಬೋಧಿಸುವ ವಿಷಯಕ್ಕೆ ಪೂರಕವಾಗಿ ಅಧಿಕ ವಿಷಯ ಸಂಗ್ರಹಣೆ ಮತ್ತು ಕಲಿವಿನ ಚಟುವಟಿಕೆಗಳನ್ನು ಯೋಜಿಸುವುದು ಕಷ್ಟ ಸಾಧ್ಯವಾಗುವುದು. ಒಮ್ಮೆ ವಿಷಯ ಸಂಗ್ರಹಣೆ ಮಾಡಿದರೂ ಅದನ್ನು ಯುಕ್ತವಾಗಿ ಸಂಘಟಿಸಿ, ವಿಶ್ಲೇಷಿಸಿ ಕ್ರಮಬದ್ಧವಾಗಿ ಮತ್ತು ಕ್ರಿಯಾತ್ಮಕವಾಗಿ ಬೋಧನೆಗೆ ಸಿದ್ಧಗೊಳಿಸಲು ಸಾಕಷ್ಟು ಸಮಯಾವಕಾಶ ಆತನಿಗಿರುವುದಿಲ್ಲ.

# ಸಂಪನ್ಮೂಲ ಘಟಕ ಯೋಜನೆ ()

❖ಅರ್ಥ :

"ಸಂಪನ್ಮೂಲ ಘಟಕವು ಶಿಕ್ಷಕರ ಜ್ಞಾನ ಮತ್ತು ಬೋಧನಾ ಸಾಮರ್ಥ್ಯವನ್ನು ಉತ್ತಮಗೊಳಿಸಲು ಸಂಪೂರ್ಣ ಘಟಕಕ್ಕೆ ವ್ಯಾಪಕವಾಗಿ ಅಂದರೆ, ಕಲಿಕೆಯ ಚಟುವಟಿಕೆ ಸುದೀರ್ಘವಾದ ಸರ್ವಕಾಲಿಕ ಯೋಜನೆಯಾಗಿದೆ".

ವ್ಯಾಖ್ಯಾನಗಳು :

❖ ಸಂಪನ್ಮೂಲ ಘಟಕವನ್ನು '**ಬೃಹತ್ ಪಾಠ ಯೋಜನೆ**' ಎಂತಲೂ ಕರೆಯುವರು. ನುರಿತ ಅನುಭವೀ ಶಿಕ್ಷಕರು ಒಟ್ಟುಗೂಡಿ ತಮ್ಮ ಬೋಧನೆಗೆ ಅನುಕೂಲವಾಗುವಂತೆ ತಯಾರಿಸುವ ಯೋಜನೆಯ ಸಂಪನ್ಮೂಲ ಘಟಕ ಎನಿಸುವುದು.

❖"ಪ್ರತಿ ಘಟಕದ ಬೋಧನೆಗೆ ಅಗತ್ಯವಾಗಿ ಬೇಕಾಗಬಹುದಾದ ವಿಷಯವಸ್ತು, ಚಟುವಟಿಕೆಗಳು ಮತ್ತು ಬೋಧನಾ ಸಾಮಾಗ್ರಿಗಳ ಒಂದು ಸಮಗ್ರ ಆಗರವೇ ಸಂಪನ್ಮೂಲ ಘಟಕ".

ಹೀಗೆ ಸಂಗ್ರಹಿಸಲಾದ ಎಲ್ಲಾ ಮಾಹಿತಿಯನ್ನು ಕ್ರಿಯಾತ್ಮಕವಾಗಿ ಹೆಣೆಯಲ್ಪಟ್ಟಿದ್ದು ಇದು ಬೋಧನೆಗೆ ಹೆಚ್ಚು ಉಪಯುಕ್ತವಾಗುತ್ತದೆ. ಇದನ್ನಾಧರಿಸಿದಂತೆ ಶಿಕ್ಷಕರು ಮೊದಲು ಘಟಕ ಯೋಜನೆಯನ್ನು ನಂತರ ಪಾಠ ಯೋಜನೆಯನ್ನು ಸಿದ್ಧಗೊಳಿಸುತ್ತಾರೆ. ಇದು ವಿಷಯದ ಗಣಿ ಮಾತ್ರವಾಗಿರದೆ ಶಿಕ್ಷಕನಿಗೆ ಮಾರ್ಗದರ್ಶನವನ್ನು ನೀಡುವುದು.

**ವ್ಯಾಖ್ಯಾನಗಳು :**

1. **ಸಿ.ವಿ.ಗುಡ್ ಪ್ರಕಾರ** : " ಒಂದು ಘಟಕದ ಸುತ್ತಲೂ ಜೋಡಿಸಲ್ಪಟ್ಟ ಬೋಧನಾ ಕಲಿಕಾ ಚಟುವಟಿಕೆಗಳ, ಸಾಮಾಗ್ರಿಗಳ, ವಿಧಾನಗಳ ಮತ್ತು ಉಲ್ಲೇಖಗಳ ವ್ಯಾಪಕ ಸಂಗ್ರಹ, ಶಿಕ್ಷಕರಿಗೆ ತಮ್ಮ–ತಮ್ಮ ತರಗತಿಗಳಿಗೆ ಬೋಧನಾ ಘಟಕಗಳನ್ನು ಅಥವಾ ಪಾಠಗಳನ್ನು ಯೋಜಿಸಿಕೊಳ್ಳಲು ಅನುಕೂಲವಾಗಲಿ ಎಂದು ಈ ರೀತಿ ಜೋಡಿಸಲಾಗಿದೆ".

- 2. ಭಾರತದ ಇತಿಹಾಸ – ಪಾಲಾಕ್ಷ
- 3. ಭಾರತದ ಇತಿಹಾಸ – ಡಾ.ಕೆ.ಸದಾಶಿವ

- ವಿದ್ಯಾರ್ಥಿಗಳಿಗೆ
- 1. ಪ್ರೌಢಶಾಲಾ ಸಮಾಜ–ವಿಜ್ಞಾನ ಪಠ್ಯಪುಸ್ತಕಗಳು
- 2.ಮೊಘಲರ ಬಗ್ಗೆ ಇರುವ ಐತಿಹಾಸಿಕ ಕಾದಂಬರಿಗಳು ಮತ್ತು ನಾಟಕಗಳು.

- ______________________